O.S.No.:264/2016
P.W.:1

ಈ ದಿನ ದಿಃ02.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಕೆ.ಎನ್.ಎಂ ವಕೀಲರಿಂದಃ**

1 ಮತ್ತು 2 ನೇ ಪ್ರತಿವಾದಿಯರು ನನಗೆ ಮಾವನಾಗಬೇಕು. 3 ನೇ ಪ್ರತಿವಾದಿ ನನಗೆ ಅತ್ತೆಯಾಗಬೇಕು. 4 ನೇ ಪ್ರತಿವಾದಿ ನನಗೆ ಹೆಂಡತಿಯಾಗಬೇಕು. 5 ನೇ ಪ್ರತಿವಾದಿ ನನ್ನ ಭಾಮೈದನಾಗಬೇಕು. 6 ನೇ ಪ್ರತಿವಾದಿ ಕ್ರಯದಾರನಾಗಿರುತ್ತಾನೆ. ಸಾಕ್ಷಿಯು 2008 ರಲ್ಲಿ ನನಗೂ ಮತ್ತು ಪ್ರತಿವಾದಿ ನಂ.1 ರಿಂದ 5 ರವರಿಗೂ ಯಾವುದೇ ರೀತಿಯ ಸಂಬಂಧ ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನನಗೆ ಹಳೆಯ ಸಂಬಂಧ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಹೆಂಡತಿ ಅಂದಾಜು 7-8 ವರ್ಷಗಳಿಂದ ಬೇರೆ ಬೇರೆ ಆಗಿದ್ದೆವು, ಕಳೆದ ಒಂದು ತಿಂಗಳಿನಿಂದ ಈಗ ಸರಿಯಾಗಿರುತ್ತೇವೆಂದು ನುಡಿಯುತ್ತಾರೆ. ನನಗೆ 11 ವರ್ಷ ಮತ್ತು 6 ವರ್ಷದ ಒಟ್ಟು ಇಬ್ಬರೂ ಮಕ್ಕಳಿರುತ್ತಾರೆ. 8 ವರ್ಷಗಳಿಂದ ನಾನು ಮತ್ತು ನನ್ನ ಹೆಂಡತಿ ಬೇರೆ ಬೇರೆ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 6 ನೇ ಎದುರುದಾರ ಸಲ್ಲಿಸಿರುವ ಅಮಲ್‌ಜಾರಿ ಪ್ರಕರಣದಲ್ಲಿ ಶಿವರಾಮೇಗೌಡ ಮೃತರಾಗಿರುತ್ತಾರೆಂದು ನಾನು ವರದಿ ಮಾಡಿರುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ಶಿವರಾಮೇಗೌಡ ಮೃತರಾಗಿರುವ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ಪ್ರತಿವಾದಿ ನಂ.1, 2 ಮತ್ತು ನಾನು ಅಮಲ್ಜಾರಿ ಪ್ರಕರಣದಲ್ಲಿ ಅಮೀನರು ಜಮೀನಿನ ಕಬ್ಜೆಯನ್ನು ನ್ಯಾಯಾಲಯದ ಆದೇಶದಂತೆ ಡಿಕ್ರಿದಾರರಿಗೆ ಕೊಡಿಸಲು ಬಂದಂತಹ ಸಂದರ್ಭದಲ್ಲಿ ನಾವು ಗಲಾಟೆ ಮಾಡಿರುವುದರ ಕುರಿತಾಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ

ಸಂಬಂಧಿಸಿದಂತೆ ಜಮೀನಿಗೆ ಕಲ್ಲುತಂತಿ ಹಾಕಿರುವುದನ್ನು ನಾನು ಮತ್ತು ನಮ್ಮ ಕುಟುಂಬದವರು ಗಲಾಟೆ ಮಾಡಿ ಕಲ್ಲುತಂತಿ ಕಿತ್ತು ತೆಗೆದು ಹಾನಿ ಮಾಡಿರುತ್ತೇವೆಂದು ನಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸುಳ್ಳು ಪ್ರಕರಣ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

ಈ ದಾವೆ ಸಲ್ಲಿಸುವ ಸಂದರ್ಭದಲ್ಲಿ ಮೂಲ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಈ ಪ್ರಕರಣದಲ್ಲಿ ದಾಖಲಿಸಿರುವುದಿಲ್ಲ, ಅಮಲ್ಜಾರಿ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ಕರಾರು ಪತ್ರದ ಕೊರತೆಯ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಭರಿಸಲು ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ನೇರವಾಗಿ ಜಿಲ್ಲಾ ನೋಂದಣಾಧಿಕಾರಿಗಳ ಬಳಿ ಅರ್ಜಿ ಸಲ್ಲಿಸಿ ಕೊರತೆಯ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಿರುತ್ತೇನೆಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶದ ಮೇರೆಗೆ ಸ್ವಾಧೀನವನ್ನು ಕೊಟ್ಟನಂತರ ನಾನು ಕೊರತೆ ಮುದ್ರಾಂಕ ಶುಲ್ಕ ಭರಿಸಿರುತ್ತೇವೆ ಎಂದರೆ ಸರಿಯಲ್ಲ.

ಜಿಲ್ಲಾ ನೋಂದಣಾಧಿಕಾರಿಗಳ ಬಳಿ ಕೊರತೆಯ ಮುದ್ರಾಂಕ ಶುಲ್ಕವನ್ನು ಭರಿಸಲು ಸಲ್ಲಿಸಿದ ಅರ್ಜಿಯಲ್ಲಿ ನಾನು ಈ ದಾವೆಯ ಪ್ರತಿವಾದಿ ನಂ.6 ರವರನ್ನು ಅಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಸದರಿ ಅರ್ಜಿಯಲ್ಲಿ ಈ ದಾವೆ ಚಾಲ್ತಿಯಲ್ಲಿರುವ ವಿಚಾರವನ್ನು ನಮೂದಿಸಿಲ್ಲ ಎಂದರೆ ಸರಿ. ನ್ಯಾಯಾಲಯದ ಫೀಯನ್ನು ಕಡಿಮೆ ಭರಿಸಲು ಕರಾರು ಪತ್ರದಲ್ಲಿ ಕರಾರಿನ ಪ್ರತಿಫಲವನ್ನು ಉದ್ದೇಶಪೂರ್ವಕವಾಗಿ ಕಡಿಮೆ ತೋರಿಸಿ ದಾವೆ ದಾಖಲಾದ ನಂತರ ಜಿಲ್ಲಾ ನೋಂದಣಾಧಿಕಾರಿಗಳ ಬಳಿ ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡ ಭರಿಸಿರುತ್ತೇನೆ ಎಂದರೆ ಸರಿಯಲ್ಲ.

O.S.No.:264/2016
P.W.:1

ನಾನು 20 ಗುಂಟೆಗೆ 22 ಲಕ್ಷ 40 ಸಾವಿರ ಮೊತ್ತಕ್ಕೆ ನನ್ನ ಹೆಂಡತಿ ಮತ್ತು ಮಾವನೊಂದಿಗೆ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಮೇಗೌಡನ ಮೃತ ತಮ್ಮನ ಹೆಂಡತಿ ಮತ್ತು ಮಕ್ಕಳನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ದಾವಾಸ್ವತ್ತು ಶಿವರಾಮೇಗೌಡರ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಶಿವರಾಮೇಗೌಡನ ಮೃತ ತಮ್ಮನ ಹೆಂಡತಿ ಮತ್ತು ಮಗಳು ಅವರ ಪಾಲಿನ ಮೊತ್ತವನ್ನು ತೆಗೆದುಕೊಂಡು ಹೋಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಲ್ಲದೆ ನನ್ನ ಮಾವ ಮತ್ತು ಹೆಂಡತಿಯ ಭಾಗದ ಹಣವನ್ನು ಸದರಿಯವರು ಪಡೆಯದೆ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರಕರಣಕ್ಕೆ ಅನುಕೂಲವಾಗಲು ಕುಟುಂಬದ ಸದಸ್ಯರೊಂದಿಗೆ ಶ್ಯಾಮಿಲಾಗಿ ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ದಾವಾಸ್ವತ್ತಿನ ಪಹಣಿಯಲ್ಲಿ 6 ನೇ ಪ್ರತಿವಾದಿಯ ಹೆಸರು ಬರುತ್ತಿದ್ದು, ಅಲ್ಲದೆ ಅವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಕರಾರು ಪತ್ರ ಮಾಡಿದ ದಿನಾಂಕದ ಹಿಂದಿನ ವರ್ಷದ ಹಳೆಯ ಛಾಪಾ ಕಾಗದವನ್ನು ತಂದು ಅದರ ಮೇಲೆ ನನ್ನ ಕುಟುಂಬದ ಸದಸ್ಯರೊಂದಿಗೆ ಶ್ಯಾಮಿಲಾಗಿ ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ದಾವಾಸ್ವತ್ತಿನ ಮೌಲ್ಯ 5 ಲಕ್ಷಕ್ಕಿಂತ ಹೆಚ್ಚಿಗೆ ಇತ್ತು ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

O.S.No.:264/2016
P.W.:1

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.